ವಿಚಲಿತರಾಗಿ ಸಾಮಾನ್ಯ ಜನರಂತೆ ಅಳಲು ಆರಂಭಿಸಿದರು. ಆ ಶೋಕದ ನಡುವೆಯೂ ನಾವು ಯಾರೂ ಊಟ ಮಾಡದೆ ಇದ್ದುದು ಅವರ ನೆನಪಿಗೆ ಬಂತು. ಕೂಡಲೇ ಎದ್ದು ದೇವರಿಗೆ ನೈವೇದ್ಯ ನೀಡಿ, ನಮಗೆಲ್ಲಾ ಊಟ ಹಾಕಲು ಅವಸರದಿಂದ ಸಿದ್ಧತೆ ಮಾಡಲಾರಂಭಿಸಿದರು. ದುಃಖದ ಯಾವ ಚಿಹ್ನೆಯೂ ಈಗ ಅವರ ನಡೆನುಡಿಗಳಲ್ಲಿ ಕಂಡುಬರುತ್ತಿರಲಿಲ್ಲ.

ರಾಧುವಿನ ಮಗುವಿಗೆ ಮೂರು ತಿಂಗಳಾದಾಗ ಸುಧೀರಾ ಅಕ್ಕ ಸ್ಕೂಲಿಗೆ ಹಿಂತಿರುಗುವಂತೆ ಪತ್ರ ಬರೆದರು. ಸ್ಕೂಲಿನಲ್ಲಿ ನನ್ನ ಅಗತ್ಯವಿದೆ ಎಂದು ಕೇಳಿ ಶ್ರೀಮಾತೆಯೂ ಅದಕ್ಕೆ ಒಪ್ಪಿಕೊಂಡರು. ನಾನು ಕೊಲ್ಕತಾಗೆ ಬಂದ ಒಂದು ತಿಂಗಳ ನಂತರ ಶ್ರೀಮಾತೆ ಜಯರಾಂಬಾಟಿಗೆ ಹೋದರು. ಮಲೇರಿಯಾ ತಾಗಿದ್ದರಿಂದ ಅಲ್ಲಿ ಅವರಿಗೆ ಯಾವಾಗಲೂ ಜ್ವರ ಬರುತ್ತಿತ್ತು. ಶಾರದಾನಂದರು ಶ್ರೀಮಾತೆಯವರನ್ನು ಕೊಲ್ಕತಾಗೆ ಕರೆಸಿಕೊಂಡರು. ಅವರು ಉದ್ಬೋಧನಕ್ಕೆ ಬಂದಾಗ ಯೋಗಿನ್ ಮಾ ಉದ್ಗರಿಸಿದರು, "ಇದೇನಿದು! ಸುಟ್ಟ ಮರದ ಕೊರಡಿನಂತಾಗಿದ್ದಾರೆ! ಈ ಅವಸ್ಥೆಗೆ ಮುಟ್ಟಿಸಿ ಅವರನ್ನು ಇಲ್ಲಿಗೆ ಕರೆತಂದಿರಾ?"

ಶ್ರೀಮಾತೆ ಬಂದ ೩–೪ ದಿನಗಳಲ್ಲೇ ಶಾರದಾನಂದರು ನನ್ನನ್ನು ಶ್ರೀಮಾತೆಯ ಸೇವೆಗೆ ಬರುವಂತೆ ಹೇಳಿಕಳುಹಿಸಿದರು. ನಾನು ಆಗ ಬೆನೆಟೋಲಾ ಎಂಬ ಜಾಗದಲ್ಲಿ ಪರಿಚಿತರೊಬ್ಬರ ಮನೆಯಲ್ಲಿ ಉಳಿದುಕೊಂಡು, ಟೈಫಾಯ್ಡ್ ರೋಗಿಯೊಬ್ಬರ ಸೇವೆ ಮಾಡುತ್ತಿದ್ದೆ. ಆಕೆಯೂ ಆ ಸಮಯದಲ್ಲಿ ಚೇತರಿಸಿಕೊಳ್ಳುತ್ತಿದ್ದರು.

ನಿವೇದಿತಾ ಸ್ಕೂಲಿನಲ್ಲಿ ಆಗ ಹಣಕಾಸಿನ ತೊಂದರೆ ಇತ್ತು. ನಮ್ಮ ಪರಿಚಿತರ ಮನೆಗಳಲ್ಲಿ ರೋಗಿಗಳ ಸೇವೆಯ ಅಗತ್ಯವಿದ್ದರೆ ನಾನು ಹೋಗುತ್ತಿದ್ದೆ. ಅವರು ಹಣವನ್ನು ಸುಧೀರಾ ಅಕ್ಕ ಅವರಿಗೆ ಕಳುಹಿಸುತ್ತಿದ್ದರು. ಸ್ಕೂಲಿನಲ್ಲಿ ಮೂರು ಹೊಲಿಗೆಯ ಯಂತ್ರಗಳಿದ್ದವು. ನಾವು ಹೊಲಿದ ಬಟ್ಟೆಗಳನ್ನು ಕೆಲಸದವಳು ಮನೆಮನೆಗೆ ಹೋಗಿ ಮಾರುತ್ತಿದ್ದಳು. ಇದರಿಂದಲೂ ಸ್ಕೂಲಿಗೆ ಸ್ವಲ್ಪ ಹಣ ಸಿಕ್ಕುತ್ತಿತ್ತು.

ಶ್ರೀಮಾತೆಯ ಸೇವೆಗೆಂದು ಮಾರ್ಚ್ ತಿಂಗಳ ಆರಂಭದಲ್ಲಿ ಉದ್ಬೋಧನಕ್ಕೆ ಬಂದೆ. ಜುಲೈ ತಿಂಗಳಲ್ಲಿ ಶ್ರೀಮಾತೆ ಶರೀರತ್ಯಾಗ ಮಾಡಿದರು. ಅವರ ಆರೋಗ್ಯ ದಿನೇದಿನೇ ಕೆಡುತ್ತ ಬಂದಿತು. ಕಣ್ಣೆದುರಿಗೇ ಅವರು ಜೀರ್ಣವಾಗುತ್ತಿರುವುದನ್ನು ಕಂಡು ನನಗೆ ತುಂಬ ಸಂಕಟವಾಗುತ್ತಿತ್ತು. ಒಮ್ಮೆ ಅವರ ಎದುರಿಗೆ ತಡೆಯಲಾಗದೆ ಕಣ್ಣೀರು ಹಾಕುತ್ತ ಹೇಳಿದ್ದೆ, "ನೀವು ಹೊರಟುಹೋದರೆ ನನಗೂ ಇನ್ನು ಇಲ್ಲಿರಲು ಸಾಧ್ಯವಿಲ್ಲ" ಎಂದು. ಅದಕ್ಕೆ ಶ್ರೀಮಾತೆ ಹೇಳಿದ್ದರು, "ನೀನೂ ನನ್ನ ಬಳಿಯೇ ಬರುವೆಯಮ್ಮಾ. ಇನ್ನೆಲ್ಲಿಗೆ ಹೋಗುತ್ತೀಯಾ? ಆದರೆ ನಿನ್ನ ಕೆಲಸ ಇನ್ನೂ ಬಾಕಿಯಿದೆ. ಅದನ್ನು ಮಾಡಿದ ನಂತರ ನೀನು ಬಾ." (ಮುಂದುವರಿಯುವುದು)

## ಶ್ರೀರಾಮಕೃಷ್ಣ ಸಂಭಾಷಣ ಸುಧೆ

**ಭಕ್ತ : ಒಬ್ಬ ಸಾಧು ಎಂದು ಗುರುತಿಸುವ ಬಗೆ ಹೇಗೆ?**

**ಶ್ರೀರಾಮಕೃಷ್ಣರು:** ಯಾರ ಮನಸ್ಸು, ಪ್ರಾಣ, ಅಂತರಾತ್ಮ ಭಗವದ್ಗತವಾಗಿದೆಯೊ ಆತನೇ ಸಾಧು. ಯಾರು ಕಾಮಕಾಂಚನ ತ್ಯಾಗಿಯೊ ಆತನೇ ಸಾಧು. ಯಾರು ಸಾಧುವೋ ಆತ ಹೆಂಗಸರನ್ನು ಎಂದಿಗೂ ಐಹಿಕ ದೃಷ್ಟಿಯಿಂದ ನೋಡುವುದಿಲ್ಲ. ಸರ್ವದಾ ಅವರಿಂದ ದೂರದಲ್ಲೇ ಇರುತ್ತಾನೆ. ಒಂದು ಪಕ್ಷ ಅವರನ್ನು ಸಮೀಪಿಸಬೇಕಾಗಿ ಬಂದರೆ ಅವರನ್ನು ಮಾತೃದೃಷ್ಟಿಯಿಂದ ನೋಡುತ್ತ ಅವರನ್ನು ಪೂಜೆಮಾಡುತ್ತಾನೆ. ಸಾಧು ಯಾವಾಗಲೂ ಭಗವಚ್ಚಿಂತನೆಯನ್ನೇ ಮಾಡುತ್ತಾನೆ. ಭಗವತ್ಸಂಬಂಧವಾಗಿ ಹೊರತು ಬೇರೆ ಯಾವ ಮಾತನ್ನೂ ಆಡುವುದಿಲ್ಲ. ಸರ್ವಭೂತಗಳಲ್ಲಿಯೂ ಭಗವಂತನೇ ಇದ್ದಾನೆ ಎಂಬುವುದನ್ನು ಅರಿತು ಅವರ ಸೇವೆಯನ್ನು ಮಾಡುತ್ತಾನೆ. ಸಾಮಾನ್ಯವಾಗಿ ಇವು ಸಾಧುವಿನ ಲಕ್ಷಣಗಳು.

**ಭಕ್ತ : ನಿರ್ಜನಪ್ರದೇಶದಲ್ಲಿ ಯಾವಾಗಲೂ ಇದ್ದುಕೊಂಡಿರಬೇಕಾಗುತ್ತದೆಯೇ?**

**ಶ್ರೀರಾಮಕೃಷ್ಣರು:** ಫುಟ್‌ಪಾತಿನಲ್ಲಿರುವ ಮರಗಳನ್ನು ನೀನು ನೋಡಿಲ್ಲವೇನು? ಅವು ಸಸಿಯಾಗಿರುವವರೆಗೆ ಬೇಲಿ ಹಾಕಬೇಕು. ಇಲ್ಲದಿದ್ದರೆ ದನ, ಕರು, ಆಡು ಅವನ್ನು ತಿಂದುಬಿಡುತ್ತವೆ. ಆದರೆ ಗಿಡದ ಕಾಂಡ ದಪ್ಪವಾಯಿತು ಎಂದರೆ, ಬಳಿಕ ಬೇಲಿ ಬೇಕಾಗು ವುದಿಲ್ಲ. ಅನಂತರ ಅದಕ್ಕೆ ಆನೆಯನ್ನು ತಂದು ಕಟ್ಟಿದರೂ ಅದಕ್ಕೇನೂ ಆಗುವುದಿಲ್ಲ. ಅದೇ ರೀತಿಯಾಗಿ ನೀನು ಮನಸ್ಸನ್ನು ದೃಢವಾಗಿ ಮಾಡಿಕೊಂಡುಬಿಟ್ಟಿದ್ದೇ ಆದರೆ ಇನ್ನು ಚಿಂತೆಯೇನು? ಭಯವೇನು? ವಿವೇಕವನ್ನು ಗಳಿಸಿಕೊಳ್ಳಲು ಮೊದಲು ಪ್ರಯತ್ನಪಡು. ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸು. ಆಗ ಅದರ ಅಂಟು ಅಂಟಿಕೊಳ್ಳುವುದಿಲ್ಲ.

**ಭಕ್ತ : ಯಾವುದಕ್ಕೆ ವಿವೇಕ ಅಂತ ಹೆಸರು?**

**ಶ್ರೀರಾಮಕೃಷ್ಣರು:** ಭಗವಂತನೊಬ್ಬನೇ ಸತ್, ಉಳಿದುದೆಲ್ಲಾ ಅಸತ್ ಎಂಬ ವಿಚಾರ. ಸತ್ ಎಂದರೆ ನಿತ್ಯವಾದದ್ದು, ಅಸತ್ ಎಂದರೆ ಅನಿತ್ಯವಾದ್ದು. ಯಾರು ವಿವೇಕವನ್ನು ಗಳಿಸಿಕೊಂಡಿದ್ದಾರೊ ಅವರಿಗೆ ಗೊತ್ತಿದೆ, ಭಗವಂತನೊಬ್ಬನೇ ವಸ್ತು, ಉಳಿದುದೆಲ್ಲಾ ಅವಸ್ತು ಎಂದು. ವಿವೇಕ ಉದಯವಾಯಿತು ಎಂದರೆ, ಭಗವಂತನನ್ನು ಅರಿಯಬೇಕು ಎಂಬ ಇಚ್ಛೆಯಾಗುತ್ತದೆ. ಅಸತ್ ವಸ್ತುಗಳನ್ನು ಎಂದರೆ ದೇಹಸುಖ, ಲೋಕಮಾನ್ಯತೆ, ಹಣ ಇವೇ ಮೊದಲಾದುವುಗಳನ್ನು ಪ್ರೀತಿಸಿದರೆ, ಸತ್ಸ್ವರೂಪವಾದ ಭಗವಂತನನ್ನು ಅರಿಯಲು ಇಚ್ಛೆಯುಂಟಾಗುವುದಿಲ್ಲ. ಸದ್ವಿಚಾರ ಬಂದ ಮೇಲೆಯೇ ಭಗವಂತನನ್ನು ಅರಿಯಲು ಇಚ್ಛೆಯುಂಟಾಗುತ್ತದೆ.

# ಕರುಣಾಸಾಗರ ಶ್ರೀರಾಮಕೃಷ್ಣ

ಧಾರಾವಾಹಿ

ಗಿರೀಶ್‌ಚಂದ್ರ ಘೋಷ್

**(ಶ್ರೀರಾಮಕೃಷ್ಣರು ಬಲರಾಮ ಬೋಸ್‌ನ ಮನೆಗೆ ಬಂದಿದ್ದಾರೆ. ಗಿರೀಶನೂ ಅಲ್ಲಿಗೆ ಹೋಗಿದ್ದಾನೆ. ಕಬೀರ ರಮಾನಂದರ ಹತ್ತಿರ ಮಂತ್ರದೀಕ್ಷೆ ತೆಗೆದುಕೊಂಡ ಪ್ರಸಂಗದ ಮಾತುಕತೆ ನಡೆದಿದೆ.)**

ಮಾತು ನಾಟಕರಂಗದ ಕಡೆ ತಿರುಗಿತು. ಶ್ರೀರಾಮಕೃಷ್ಣರು, "ನಿನ್ನ ನಾಟಕ ನನಗೆ ಇಷ್ಟವಾಯಿತು. ಜ್ಞಾನಸೂರ್ಯ ನಿನ್ನ ಮೇಲೆ ಪ್ರಕಾಶಿಸಲು ಆರಂಭಿಸಿದ್ದಾನೆ. ನಿನ್ನ ಹೃದಯದಲ್ಲಿರುವ ಎಲ್ಲ ದೋಷಗಳೂ ತೊಡೆದುಹೋಗುವುವು. ಇಷ್ಟರಲ್ಲೇ ಭಕ್ತಿ ಉದಯಿಸಿ ನಿನ್ನ ಜೀವನವನ್ನು ಆನಂದ ಮತ್ತು ಶಾಂತಿಯಿಂದ ಮಧುರವನ್ನಾಗಿಸುವುದು" ಎಂದು ಹೇಳಿದರು. ನನ್ನಲ್ಲಿ ಯಾವ ಗುಣಗಳೂ ಇಲ್ಲ, ಕೇವಲ ಸ್ವಲ್ಪ ಹಣವನ್ನು ಮಾಡುವ ಉದ್ದೇಶದಿಂದ ನಾಟಕವನ್ನು ಬರೆದೆನಷ್ಟೆ ಎಂದು ನಾನು ಹೇಳಿದೆ. ಅವರು ಸುಮ್ಮನಿದ್ದರು. ಅನಂತರ ಹೇಳಿದರು, "ನಿನ್ನ ನಾಟಕಮಂದಿರಕ್ಕೆ ಕರೆದುಕೊಂಡು ಹೋಗಿ, ಇನ್ನೊಂದು ನಾಟಕವನ್ನು ತೋರಿಸಲು ಸಾಧ್ಯವೇ?" "ಆಗಲಿ, ನಿಮಗೆ ಇಷ್ಟವಾದ ದಿನ ಕರೆದುಕೊಂಡು ಹೋಗುವೆ" ಎಂದು ನಾನು ಹೇಳಿದೆ. "ನೀನು ಸ್ವಲ್ಪ ಹಣವನ್ನು ತೆಗೆದುಕೊಳ್ಳಬೇಕು" ಎಂದರು. "ಆಗಲಿ, ನೀವು ಎಂಟಾಣೆ ಕೊಡಿ" ಎಂದೆ. "ಅದಕ್ಕೆ ಬಾಲ್ಕನಿ ಸೀಟು ಸಿಗುತ್ತದೆ. ಅಲ್ಲಿ ಬಹಳ ಗದ್ದಲ" ಎಂದು ಶ್ರೀರಾಮಕೃಷ್ಣರು ಹೇಳಿದರು. "ಇಲ್ಲ, ಇಲ್ಲ, ನೀವು ಅಲ್ಲಿ ಹೋಗಬೇಕಾಗಿಲ್ಲ. ನೀವು ಕಳೆದ ಸಲ ಎಲ್ಲಿ ಕುಳಿತಿದ್ದರೊ ಅಲ್ಲೇ ಕುಳಿತುಕೊಳ್ಳಿ" ಎಂದು ನಾನು ಹೇಳಿದೆ. "ಹಾಗಾದರೆ ನೀನು ಒಂದು ರೂಪಾಯಿ ತೆಗೆದುಕೊಳ್ಳಬೇಕು" ಎಂದರು. ನಾನು, "ಆಗಲಿ, ನಿಮ್ಮ ಇಚ್ಛೆ" ಎಂದೆ. ಹೀಗೆ ನಮ್ಮ ಮಾತು ಮುಗಿಯಿತು.

ಕೂಡಲೆ ಹರಿಪಾದ ಮತ್ತು ನಾನು ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ ಬಲರಾಮನ ಮನೆಯಿಂದ ಹೊರಬಿದ್ದೆವು. ಹರಿಪಾದ ಕೇಳಿದ, "ಅವರ ಬಗ್ಗೆ ನಿನ್ನ ಅಭಿಪ್ರಾಯವೇನು?" ನಾನು ಹೇಳಿದೆ, "ಅವರು ದೊಡ್ಡ ಭಕ್ತರು" ಎಂದು. ಆಗ ನನ್ನ ಹೃದಯ ಅವರ್ಣನೀಯ ಆನಂದದಿಂದ ತುಂಬಿತ್ತು. ಏಕೆಂದರೆ, ಗುರುವಿಗಾಗಿನ ನನ್ನ ಹುಡುಕಾಟ ಮುಗಿದಂತಿತ್ತು. ನನ್ನ ಗುರುವಿನ ಆಯ್ಕೆ ಈಗಾಗಲೇ ಆಗಿದೆ ಎಂದು ಶ್ರೀರಾಮಕೃಷ್ಣರು ಮೊದಲೇ ಹೇಳಿದ್ದರಲ್ಲವೆ?

ಗುರುವಿನ ಬಗ್ಗೆ ನಾನು ಮಾಡುತ್ತಿದ್ದ ಆಕ್ಷೇಪಣೆಗಳನ್ನು ಅವಲೋಕಿಸಿಕೊಂಡೆ. ಆಗ ನನ್ನಲ್ಲಿದ್ದ ವಿಚಾರಸರಣಿಯ ಹಿಂದೆ ಇದ್ದ ದರ್ಪ ಮತ್ತು ಅಹಂಕಾರ ನನಗೆ ಈಗ ಅರ್ಥವಾಯಿತು. "ಎಷ್ಟೇ ಆದರೂ, ಗುರುವೂ ಒಬ್ಬ ಮನುಷ್ಯ; ಶಿಷ್ಯನೂ ಒಬ್ಬ ಮನುಷ್ಯ. ಒಬ್ಬ ಮಾನವ ಮತ್ತೊಬ್ಬನ ಮುಂದೆ ನಿಂತು ಕೈಜೋಡಿಸಿ ಗುಲಾಮನಂತೆ ಏಕೆ ತಾನೇ ಅನುಸರಿಸಬೇಕು?" ಎಂದು ನಾನು ಯೋಚಿಸುತ್ತಿದ್ದೆ. ಆದರೆ ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದಂತೆಲ್ಲ, ಅವರ ಸಮ್ಮುಖದಲ್ಲಿ ನನ್ನ ಅಹಂಕಾರ ಕರಗಿ ಧೂಳೀಪಟವಾಯಿತು. ನಾಟಕಮಂದಿರದಲ್ಲಿ ನನ್ನನ್ನು ಭೇಟಿ ಮಾಡುವಾಗ ನನಗೆ ಮೊದಲು ನಮಸ್ಕರಿಸಿದವರು ಅವರೇ. ಅಂತಹ ವಿನಮ್ರ ವ್ಯಕ್ತಿಯ ಮುಂದೆ ನನ್ನ ಅಹಂಕಾರ ಉಳಿದಿರಲು ಹೇಗೆ ತಾನೇ ಸಾಧ್ಯ? ಅವರ ವಿನಯದ ನೆನಪು ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು.

ಬಲರಾಮನ ಮನೆಯಲ್ಲಿ ಅವರನ್ನು ಭೇಟಿ ಮಾಡಿದ ಕೆಲವು ದಿನಗಳ ನಂತರದ ಘಟನೆ. ನಾನು ನಾಟಕಮಂದಿರದಲ್ಲಿ ಬಣ್ಣ ಬಳಿದುಕೊಳ್ಳುವ ಕೋಣೆಯಲ್ಲಿ ಕುಳಿತಿದ್ದಾಗ ಭಕ್ತರೊಬ್ಬರು ತವಕದಿಂದ ಬಂದು, "ಶ್ರೀರಾಮಕೃಷ್ಣರು ಗಾಡಿಯಲ್ಲಿ ಬಂದಿದ್ದಾರೆ" ಎಂದು ಹೇಳಿದರು. "ಬಹಳ ಒಳ್ಳೆಯದು, ಅವರನ್ನು ಒಂದು ಬಾಕ್ಸ್ ಸೀಟಿನಲ್ಲಿ ಕೂಡಿಸಿ" ಎಂದು ಹೇಳಿದೆ. ಅದಕ್ಕೆ ಭಕ್ತರು, "ನೀವು ಬಂದು ಅವರನ್ನು ಸ್ವಾಗತಿಸಿ, ಕುಳಿತುಕೊಳ್ಳುವ ಸ್ಥಳಕ್ಕೆ ಅವರನ್ನು ಕರೆದುಕೊಂಡು ಹೋಗುವುದಿಲ್ಲವೆ?" ಎಂದು ಕೇಳಿದರು. ಹೇಗೋ ನಾನು ಹೋದೆ. ಅವರು ಗಾಡಿಯಿಂದ ಇಳಿಯುತ್ತಿದ್ದುದನ್ನು ನೋಡಿದೆ. ಅವರ ಪ್ರಶಾಂತ ತೇಜೋಮಯ ಮುಖವನ್ನು ನೋಡಿದ ಮೇಲೆ ನನ್ನ ಕಲ್ಲುಹೃದಯ ಕರಗಿತು. ನಾಚಿಕೆಯಿಂದ ನನ್ನನ್ನು ನಾನೇ ಶಪಿಸಿಕೊಂಡೆ. ಅದು ಇಂದಿಗೂ ನನ್ನನ್ನು ಕಾಡುತ್ತಿದೆ. ಇಂತಹ ಮಧುರ ಸಭ್ಯ ವ್ಯಕ್ತಿಯನ್ನು ಸ್ವಾಗತಿಸಲು ನಾನು ನಿರಾಕರಿಸಿದೆನಲ್ಲಾ! ಅನಂತರ, ನಾನು ಅವರನ್ನು ಮಹಡಿಯ ಮೇಲಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಅವರ ಪಾದವನ್ನು ಮುಟ್ಟಿ ನಮಸ್ಕರಿಸಿದೆ. ನನ್ನ ಸ್ವಭಾವದಲ್ಲಿ ಆದ ಈ ಬದಲಾವಣೆಗೆ ಕಾರಣ ಇಂದಿಗೂ ನನಗೆ ತಿಳಿಯದು. ಆದರೆ, ಆ ಸಮಯದಲ್ಲಿ ಒಂದು ಬದಲಾವಣೆ ಬಂದುಬಿಟ್ಟಿತ್ತು. ನಾನು ಬೇರೆ ವ್ಯಕ್ತಿಯೇ ಆಗಿಬಿಟ್ಟಿದ್ದೆ. ನಾನು ಅವರಿಗೆ ಒಂದು ಗುಲಾಬಿ ಹೂವನ್ನು ಕೊಟ್ಟೆ. ಅವರು ಅದನ್ನು ತೆಗೆದುಕೊಂಡರು. ನಂತರ ಅವರು, "ದೇವರು ಅಥವಾ ಶೋಕಿಲಾಲ ಮಾತ್ರ ಇದಕ್ಕೆ ಯೋಗ್ಯ. ಇದನ್ನು ತೆಗೆದುಕೊಂಡು ನಾನೇನು ಮಾಡಲಿ?" ಎಂದು ಹೇಳುತ್ತ ಹೂವನ್ನು ಹಿಂತಿರುಗಿ ಕೊಟ್ಟರು.

ಶ್ರೀರಾಮಕೃಷ್ಣರು ಸ್ಟಾರ್ ಥಿಯೇಟರಿನ ಎರಡನೆಯ ಅಂತಸ್ತಿನಲ್ಲಿರುವ ವಿಶೇಷ ಕೊಠಡಿಗೆ ಬಂದರು. ಅದು ಸಂಗೀತ ಕಛೇರಿ ನಡೆಯುವಾಗ ಮೇಲಂತಸ್ತಿನವರು ಕುಳಿತು ಕೇಳುವ ಸ್ಥಳವಾಗಿತ್ತು. ಅನೇಕ ಭಕ್ತರು ಅಲ್ಲಿಗೆ ಬಂದು ಸೇರಿದರು.